# ನವಿಲುಗನ್ನಡಿ

ಏಪ್ರಿಲ್ ಸಂಚಿಕೆಯ ಮುಖಪುಟ (ಕಲಾಕೃತಿ: ಆನಂದ ಟೋಂಬ್ರೆ) ಆಕರ್ಷಕ. ಅಮವಾಸ್ಯೆಯ ರಾತ್ರಿ ಚಂದ್ರನ ದರ್ಶನದ ಅನುಭವವನ್ನು ಮುಖಪುಟ ಕೊಟ್ಟಿತು. ಒಳಗಿನ ಬರಹಗಳೂ ಖುಷಿ ಕೊಟ್ಟವು.

**ನಗರ ಗುರುದೇವ ಭಂಡಾರ್ಕರ ಹೊಸನಗರ,**
**ರಾಮಚಂದ್ರ ಗೆದ್ದಣ್ಣವರ, ಧಾರವಾಡ**

ಗಿರೀಶ ಕಾಸರವಳ್ಳಿ ಮತ್ತು ಗೋಪಾಲಕೃಷ್ಣ ಪೈ ಅವರ ‘ಮಾತು–ಕತೆ’ ಅನೇಕ ಒಳನೋಟಗಳಿಂದ ಕೂಡಿದೆ. ಸಿನಿಮಾ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ.

**ಎಸ್. ಮಹಾದೇವ, ಚೆನ್ನೈ**

ಉತ್ತಮ ಕಥನ ಶೈಲಿಯ ಕತೆ ‘ಸರಸ್ವತಿಯ ಸಾಕ್ಷಿ’ (ಉಷಾ ನರಸಿಂಹನ್) ಸಂಗೀತಲೋಕದ ಅಂತಃಸತ್ವವನ್ನು ತೆರೆದಿಡುತ್ತದೆ.


**ಅಕ್ಕಿಹೆಬ್ಬಾಳು ನಾಗರಾಜ್, ಮೈಸೂರು**

ಈ ಸಂಚಿಕೆಯ ಕತೆಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ‘ನೀವು ಯಾರೆಂದೇ ನನಗೆ ಗೊತ್ತಿಲ್ಲ!’ (ಓ’ ಹೆನ್ರಿ), ‘ಸ್ವೀಕಾರ’ (ಸಿ.ಎನ್. ಮುಕ್ತಾ), ‘ಏನೊಂದೂ ಆಗದವರು’ (ನೇಮಿಚಂದ್ರ) ಕತೆಗಳು ಓದಿದ ಬಳಿಕವೂ ಕಾಡುತ್ತವೆ.

**ಎಚ್.ಎಸ್. ಸತ್ಯನಾರಾಯಣರಾವ್,**
**ಅರಕಲವಾಡಿ**

‘ಗಯ್ಯಾಳಿ’ (ಚೀಮನಹಳ್ಳಿ ರಮೇಶಬಾಬು) ಹಾಗೂ ‘ಸ್ವೀಕಾರ’ ಕತೆಗಳು ಚೆನ್ನಾಗಿವೆ. ವಾಗೀಶ್ ಹೆಗಡೆ ಮತ್ತು ಸೃಜನ್ ಅವರ ರೇಖಾಚಿತ್ರಗಳು ಇಷ್ಟವಾದವು. ಶ್ರೀವಿಭಾವನ ಮತ್ತು ಕುಮುದಾ ಪುರುಷೋತ್ತಮ್ ಅವರ ಹಾಸ್ಯ ಬರಹಗಳು ಸಂಗ್ರಹ ಯೋಗ್ಯ.

**ಶ್ರುತಿ ಭಟ್, ಮುಂಬಯಿ**




ಅನುವಾದಿತ ಕತೆ ‘ನೀವು ಯಾರೆಂದೇ ನನಗೆ ಗೊತ್ತಿಲ್ಲ’ ಮತ್ತು ನೀಳ್ಗತೆ ‘ಆರ್ಯ ವೀರ್ಯ’ ಓದುಗರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿವೆ.

**ಸಂಧ್ಯಾ ಸತೀಶ ಭಟ್, ಮುಂಬಯಿ**

ವಾಸುದೇವ್ ಮೂರ್ತಿ ಪಿ. ಅವರ ಪತ್ತೆದಾರಿ ಕತೆ ‘ಒಂದು ಕಣ್ಮರೆ ಪ್ರಸಂಗ’ದ ಶೈಲಿ ಚೆನ್ನಾಗಿದೆ. ಕೊನೆಯವರೆಗೂ ಓದುಗರ ಕುತೂಹಲವನ್ನು ಕಾದಿಟ್ಟುಕೊಳ್ಳುವಲ್ಲಿ ಕತೆ ಯಶಸ್ವಿಯಾಗಿದೆ. ಪ್ರತಿ ಸಂಚಿಕೆಯಲ್ಲಿ ಒಂದಾದರೂ ಪತ್ತೆದಾರಿ ಕತೆ ಪ್ರಕಟಿಸಿ.

**ಸುಶಾಂತ್ ಎಸ್., ತೀರ್ಥಹಳ್ಳಿ,**
**ಸುಂದರ್, ಬೆಂಗಳೂರು**

ಪೌರಾಣಿಕ, ಚಾರಿತ್ರಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ನಾಯಕಿಯಾಗಿ ನಟಿಸಿದ ಸೋನುಬಾಯಿ (ರಂಗವಿಹಂಗಮ) ಅವರ ಪರಿಚಯ ಮಾಹಿತಿಪೂರ್ಣವಾಗಿತ್ತು.

**ಸುಮಾ, ಗದಗ**

‘ತುಂಬಾ ಹೇನಿನ ಕಥೆ’ (ಶ್ರೀವಿಭಾವನ) ಲಘು ಬರಹ ಸ್ವಾರಸ್ಯಕರವಾಗಿದ್ದು, ಓದಿಸಿಕೊಂಡಿತು.

**ಎ.ಕೆ. ಪಟ್ಟಾಭಿ, ಬೆಂಗಳೂರು**